KARNATAKA NURSING & PARAMEDICAL SCIENCES EDUCATION (REGULATION) AUTHORITY

**Karnataka State Diploma In Nursing Examination Board**

First Floor, Library Block, BMC&RI Campus, K.R.Road, Bengaluru-560002

**Ph No**: 080-26700074, 26700075 **Email**: ksdneb@gmail.com


ಕ.ರಾ.ಶು.ಪ.ಮಂ/ಸಿಬ್ಬಂದಿ/ 46 / 2020-21

Date: 30 .12.2020

## ಸುತ್ತೋಲೆ

ಸರ್ಕಾರದ ಆದೇಶ ಸಂಖ್ಯೆ ಆಕುಕ 119 ಆರ್‌ಜಿಯು 2017, ಬೆಂಗಳೂರು, ದಿನಾಂಕ 14-03-2018 ರ ಆದೇಶದಂತೆ ವಿದ್ಯಾರ್ಥಿಗಳ ಪ್ರವೇಶಾನುಮತಿಯನ್ನು ಪ್ರಾಧಿಕಾರಕ್ಕೆ ವಹಿಸಿರುವುದರಿಂದ, ಪರೀಕ್ಷಾ ಮಂಡಳಿಗೆ 2020-21 ನೇ ಸಾಲಿನ ಡಿಪ್ಲೋಮ ಇನ್ ನರ್ಸಿಂಗ್ ಕೋರ್ಸ್‌ನ ಪ್ರವೇಶಕ್ಕೆ ಮಂಡಳಿಯೊಂದಿಗೆ ಸಂಯೋಜನೆ ಹೊಂದಿರುವ ಸರ್ಕಾರಿ ಹಾಗೂ ಖಾಸಗಿ ಶುಶ್ರೂಷಾ ಶಾಲೆಗಳಲ್ಲಿ ಪ್ರವೇಶ ಮಾಡಿಕೊಂಡಿರುವ ವಿದ್ಯಾರ್ಥಿಗಳ ವಿವರಗಳನ್ನು ಮತ್ತು ಮೂಲ ದಾಖಲೆಗಳನ್ನು ಮಂಡಳಿಗೆ ಸಲ್ಲಿಸಲು ಇದೇ ಪತ್ರದ ಸಮ ಸಂಖ್ಯೆ ದಿನಾಂಕ 27-11-2020 ರಲ್ಲಿ ಆನ್‌ಲೈನ್‌ನಲ್ಲಿ ವಿದ್ಯಾರ್ಥಿಗಳ ವಿವರಗಳನ್ನು ಸಲ್ಲಿಸಲು ದಿನಾಂಕ 31-12-2020 ರವರೆಗೆ ನೀಡಲಾಗಿತ್ತು.

**ಮುಂದುವರೆದು, ಭಾರತೀಯ ಶುಶ್ರೂಷಾ ಪರಿಷತ್ತು ಪತ್ರ ಸಂಖ್ಯೆ F.No.1-6(LT)-2020-INC Date: 24-12-2020 ರಲ್ಲಿ ತಿಳಿಸಿರುವಂತೆ ಶುಶ್ರೂಷಾ ವಿದ್ಯಾರ್ಥಿಗಳ ಪ್ರವೇಶದ ದಿನಾಂಕವನ್ನು 31-01-2021 ಕ್ಕೆ ವಿಸ್ತರಿಸಿರುವುದರಿಂದ ಆನ್‌ಲೈನ್‌ನಲ್ಲಿ ವಿದ್ಯಾರ್ಥಿಗಳ ವಿವರಗಳನ್ನು ಮತ್ತು ಮೂಲ ದಾಖಲೆಗಳನ್ನು ಪ್ರತಿ ವಿದ್ಯಾರ್ಥಿ ನೊಂದಣಿಗೆ ರೂ.500/- ರಂತೆ ಮಂಡಳಿಗೆ ಸಲ್ಲಿಸಲು ಕೊನೆಯ ದಿನಾಂಕವನ್ನು 25-01-2021 ರವರೆಗೆ ವಿಸ್ತರಿಸಲಾಗಿದೆ ಹಾಗೂ ದಂಡ ಶುಲ್ಕವಾಗಿ ಪ್ರತಿ ವಿದ್ಯಾರ್ಥಿಗೆ ರೂ. 200/- ರಂತೆ ದಿನಾಂಕ 26-01-2021 ರಿಂದ ದಿನಾಂಕ: 31-01-2021 ರವರೆಗೆ ನಿಗಧಿಗೊಳಿಸಲಾಗಿದೆ.**

**ಕಡ್ಡಾಯವಾಗಿ ಪರೀಕ್ಷಾ ಮಂಡಳಿಗೆ ಸಲ್ಲಿಸಬೇಕಾದ ವಿದ್ಯಾರ್ಥಿಗಳ ಮೂಲ ದಾಖಲಾತಿಗಳು:**

1. ಎಸ್.ಎಸ್.ಎಲ್.ಸಿ ಅಂಕಪಟ್ಟಿ
2. ಪಿ.ಯು.ಸಿ ಅಂಕಪಟ್ಟಿ
3. ಎಸ್.ಸಿ ಅಂಡ್ ಎಸ್.ಟಿ ವಿದ್ಯಾರ್ಥಿಗಳಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನಕಲು
4. ಮೈಗ್ರೇಷನ್ ಪ್ರಮಾಣ ಪತ್ರ (ಹೊರ ರಾಜ್ಯದಲ್ಲಿ ವ್ಯಾಸಂಗ ಪಡೆದ ವಿದ್ಯಾರ್ಥಿಗಳು)
5. ಆದಾರ್ ಕಾರ್ಡ್ ನಕಲು
6. ಹೊರದೇಶದ ವಿದ್ಯಾರ್ಥಿಗಳು ಪಿ.ಯು.ಸಿ ಪಾಸಾದ ಸಮಾನತೆಯ ಪ್ರಮಾಣ ಪತ್ರ ನಕಲು

   ಯೂನಿಪಾರಂ ಪಾಸ್‌ಪೋರ್ಟ್ ಸೈಜ್ ಭಾವಚಿತ್ರ

ಪು.ತಿ.ನೋ.....

ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್ ಮೂಲಕ ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿಯಲ್ಲಿಯೇ ಮಾಡತಕ್ಕದ್ದು ಮತ್ತು ಆನ್‌ಲೈನ್‌ನಲ್ಲಿ ನಮೂದಿಸಿರುವ ವಿದ್ಯಾರ್ಥಿಗಳ ಮೂಲ ದಾಖಲೆಗಳನ್ನು ಕರ್ನಾಟಕ ರಾಜ್ಯ ಶುಶ್ರೂಷಾ ಪರೀಕ್ಷಾ ಮಂಡಳಿಗೆ ದಿನಾಂಕ 05-02-2021 ರೊಳಗೆ ಸಲ್ಲಿಸಬೇಕೆಂದು ಸೂಚಿಸಲಾಗಿದೆ.

ಆನ್‌ಲೈನ್ ಮೂಲಕ ನಮೂದಿಸದ ಮೂಲದಾಖಲಾತಿಗಳಿಲ್ಲದ ಹಾಗೂ ಕೊನೆಯ ದಿನಾಂಕದ ನಂತರ ಬರುವ ಯಾವುದೇ ವಿದ್ಯಾರ್ಥಿಗಳನ್ನು ನೊಂದಣಿಗೆ ಪರಿಗಣಿಸುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಸಂಸ್ಥೆಯ ಪ್ರಾಂಶುಪಾಲರುಗಳೇ ಜವಾಬ್ದಾರರಾಗಿರುತ್ತಾರೆ.

ಕಾರ್ಯನಿರ್ವಹಣಾ ನಿರ್ದೇಶಕರು

ಕರ್ನಾಟಕ ಶುಶ್ರೂಷಾ ಮತ್ತು ಅರೆವೈದ್ಯಕೀಯ

ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ, ಬೆಂಗಳೂರು.

30/12/2020

<u>ಪ್ರತಿಯನ್ನು ಇವರ ಮಾಹಿತಿಗಾಗಿ ಸಲ್ಲಿಸಿದೆ.</u>

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು.